**ಸಾಕ್ಷಿಯನ್ನು ಪುನಃ ಕರೆಯಿಸಿ ದಿಃ *21-08-2023* ರಂದು ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟಿ ಸವಾಲುಃ ಶ್ರೀ ಎಂ.ಬಿ.ಎನ್.  ಪ್ರತಿವಾದಿಯ ಪರ ವಕೀಲರಿಂದ**

ಸರ್ವೆ ನಂಬರ್ *209* ರಲ್ಲಿ ಒಂದು ಎಕೆರೆ *28* ಗುಂಟೆ ಭೂ ಸ್ವಾಧೀನವಾಗಿ ಉಳಿಕೆ *13* ಗುಂಟೆ ಮಾತ್ರ ನಮ್ಮ ಕುಟುಂಬಕ್ಕೆ ಸೇರಿದೆ ಎಂದರೆ ಸರಿಯಲ್ಲ. ಭೂ ಸ್ವಾಧೀನವಾದ ಸ್ವತ್ತಿನ ಪರಿಹಾದರದ ಮೊತ್ತವನ್ನು ನನ್ನ ತಂದೆ ಮತ್ತು ನನ್ನ ದೊಡ್ಡಪ್ಪ ಸಮನಾಗಿ ಹಂಚಿಕೊಂಡಿದ್ದಾರೆಂದರೆ ಸರಿಯಲ್ಲ. ಉಳಿಕೆ *13* ಗುಂಟೆಯಲ್ಲಿ ಪೂರ್ವಕ್ಕೆ *8* ಗುಂಟೆ ಜಮೀನನ್ನು ದೊಡ್ಡಪ್ಪ ಈರೇಗೌಡ, ಪಶ್ಚಿಮಕ್ಕೆ *5* ಗುಂಟೆ ಜಮೀನು ನನ್ನ ತಂದೆಗೆ ಎಂದು ದೊಡ್ಡ ಬ್ಯಾಡರಹಳ್ಳಿ ಗ್ರಾಮದ ನಿಂಗೇಗೌಡರವರ ಮಗ ಶಿವಣ್ಣ, ನಿಂಗೇಗೌಡರವರ ರಾಮಲಿಂಗೇಗೌಡ, ಕಾಳೇಗೌಡರ ಮಗ ಮಹದೇವ, ನಿಂಗೇಗೌಡರವರ ಮಗ ಡಿ.ಸಿ. ನಿಂಗೇಗೌಡ, ನಿಂಗೇಗೌಡರವರ ಮಗ ಬಿ.ನಿಂಗೇಗೌಡರವರು ಪಂಚಾಯಿತಿ ಮಾಡಿ ದಿಃ *15-06-2004* ರಂದು ಪಂಚಾಯಿತಿ ಪಾಲು ಪಟ್ಟಿ ಮಾಡಿದ್ದಾರೆಂದರೆ ಸರಿಯಲ್ಲ.

*2.* ಸರ್ವೆ ನಂಬರ್ *125/4* ರಲ್ಲಿ ನನ್ನ ತಂದೆಗೆ ಯಾವುದೇ ಹಿಸ್ಸೆ ಬಂದಿಲ್ಲ. ದಿಃ *15-06-2004* ರಂದು ಪಾಲುಪಟ್ಟಿಯಲ್ಲಿ ಪರಿಹಾರದ ಮೊತ್ತವನ್ನು ಹಂಚಿಕೊಳ್ಳುವ ಸಮಯಕ್ಕೆ ಸರ್ವೆ ನಂಬರ್ *125/4* ರಲ್ಲಿ ತಲಾ ಮೂರುವರೆ ಗುಂಟೆ ನನ್ನ ತಂದೆ ಮತ್ತು ನನ್ನ ದೊಡ್ಡಪ್ಪ ಹಂಚಿಕೊಂಡಿದ್ದಾರೆಂದರೆ ಸರಿಯಲ್ಲ. ನನಗೆ ಎಲ್ಲಾ ವಿಚಾರ ಗೊತ್ತಿದ್ದರೂ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಇಂದಿಗೂ ಸಹ ಸರ್ವೆ ನಂಬರ್ *209* ರ ಪೂರ್ವಕ್ಕೆ  *8* ಗುಂಟೆಯಲ್ಲಿ ದಿಃ *15-06-2004* ರ ಪಾಲು ಪಟ್ಟಿಯಂತೇ ಪ್ರತಿವಾದಿಗಳೇ ವಾಸವಾಗಿ ಸ್ವಾಧೀನದಲ್ಲಿದ್ದಾರೆಂದೆರ ಸರಿಯಲ್ಲ. ಸರ್ವೆ ನಂಬರ್ *209* ರ ಪಶ್ಚಿಮಕ್ಕೆ *5*

ಗುಂಟೆಯಲ್ಲಿ ಮಾತ್ರ ನಾವು ಸ್ವಾಧೀನದಲ್ಲಿದ್ದೇವೆಂದರೆ ಸರಿಯಲ್ಲ. ಪ್ರತಿವಾದಿಗಳು ನಮ್ಮ *5* ಗುಂಟೆ ಸ್ವತ್ತಿಗೆ ಯಾವುದೇ ತೊಂದರೆ ಕೊಟ್ಟಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

*(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗೊಳಿಸಲಾಯ್ತು).*

*ಓ ಹೇ ಕೇ ಸ ಇ ಒ*

ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ. ಪಾಂಡವಪುರ.